**ದಿನಾಂಕಃ 24.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರಿದ ಪಾಟೀಸವಾಲುಃ 1 ನೇ ಪ್ರತಿವಾದಿಪರ ವಕೀಲರಾದ ಶ್ರೀ ಎಮ್ ಆರ್ ಎಲ್ ಅವರಿಂದ–**

14. ನನ್ನ ಅಣ್ಣ ದೊಡ್ಡಯ್ಯ ಅವರ ಮರಣ ನಂತರ ದಾವ ಸರ್ವೇ ನಂ.246/1ರ ಸ್ವತ್ತಿನ ಖಾತೆ 1ನೇ ಪ್ರತಿವಾದಿ ಹೆಸರಿಗೆ ಪೌತಿ ಮೇರೆಗೆ ಆಗಿದೆ ಎಂದರೆ ಸರಿ, ಆ ರೀತಿ ಮಾಡಿಸಿಕೊಂಡಿರುವುದು ನನಗೆ ಗೊತ್ತಿಲ್ಲ. ಈ ಬಗ್ಗೆ ಸಾಕ್ಷಿಗೆ ತೋರಿಸಿದ ಎಮ್.ಆರ್ ಪ್ರತಿವಯನ್ನು ವಕೀಲರ ಕೋರಿಕೆ ಮೇರೆಗೆ ನಿಡಿ.7 ಎಂದು ಗುರುತಿಸಲಾಯಿತು.

15. ನನ್ನ, ನನ್ನ ಅಣ್ಣ ಎಲ್ಲರ ಹೆಸರಿಗೆ ಖಾತೆ ಆದ ನಂತರ ನಾನು ಆರ್.ಟಿ.ಸಿ.ಗಳನ್ನು ತೆಗೆದುಕೊಂಡಿಲ್ಲ. ನನ್ನ ಅಣ್ಣ ತೆಗೆದುಕೊಳ್ಳುತ್ತಿದ್ದರು ಮತ್ತು ಆ ವಿಚಾರವನ್ನು ನನಗೆ ತಿಳಿಸಿದ್ದರು. ಖಾತೆ ಆದ ನಂತರ ಪ್ರತಿವರ್ಷ ಆರ್.ಟಿ.ಸಿ.ಗಳನ್ನು ತೆಗೆದುಕೊಳ್ಳಲು ನಾನು ಪ್ರಯತ್ನಮಾಡಿದ್ದೆ ಆದರೆ ತೆಗೆದುಕೊಂಡಿರಲಿಲ್ಲ, ನನಗೆ ಅವರೆ ಆರ್.ಟಿ.ಸಿ.ಗಳನ್ನು ಕೊಟ್ಟಿದ್ದರು, ಈ ರೀತಿ ನೋಡಿರುವ ಕಾರಣ ಯಾವ ಯಾವ ಸ್ವತ್ತು ಯಾರ ಯಾರ ಹೆಸರಿಗೆ ಇದೆ ಎಂದು ನಾನು ನೋಡಿದ್ದೆ. ಈ ರೀತಿ ಖಾತೆ ಆಗಿರುವ ವಿಚಾರ ನನ್ನ ಗಮನಕ್ಕೂ ಬಂದಿತ್ತು ಎಂದರೆ ಸರಿ.

16. ಮೊದಲು ಕೈಬರವಣಿಗೆಯ ಆರ್.ಟಿ.ಸಿ.ಗಳು ಬರುತ್ತಿದ್ದವು ಎಂದರೆ ಸರಿ. ಈ ರೀತಿ ಕೈಬರವಣಿಗೆಯಲ್ಲಿ ಬರುತ್ತಿದ್ದ ಆರ್.ಟಿ.ಸಿ.ಗಳು ಯಾವಾಗ ಕಂಪ್ಯೂಟರೀಕೃತಗೊಂಡವು ನನಗೆ ಗೊತ್ತಿಲ್ಲ. ಸರಕಾರದವರು 2000 ನೇ ಇಸವಿಯಲ್ಲಿ ಆರ್.ಟಿ.ಸಿ.ಗಳನ್ನು ಗಣಕೀಕರಣಗೊಳಿಸಿದರು ಎಂದರೆ ನನಗೆ ಗೊತ್ತಿಲ್ಲ. ಈ ರೀತಿ 2000 ನೇ ಇಸವಿಯಲ್ಲಿ ಆರ್.ಟಿ.ಸಿ.ಗಳು ಗಣಕೀಕರಣಗೊಂಡಾಗ ಸರಕಾರವೇ ಅವರವರ ಮನೆಗೆ ಆರ್.ಟಿ.ಸಿ. ಪ್ರತಿಗಳನ್ನು ಉಚಿತವಾಗಿ ತಲುಪಿಸಿದರು ಎಂದರೆ ನನಗೆ ಗೊತ್ತಿಲ್ಲ. ನಾನು 2015ರಲ್ಲಿ ನಿವೃತ್ತಿಯಾಗಿದ್ದೇನೆ. ನಾನು ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಕಾರಣ ನನಗೆ ಸರಕಾರವು ಹೊರಡಿಸುವ ಎಲ್ಲಾ ಆದೇಶಗಳ ಅರಿವು ಇರುತ್ತದೆ ಎಂದರೆ ಸರಿಯಲ್ಲ. ನನಗೆ ಈ ವಿಚಾರಗಳ ಅರಿವು ಇದ್ದರು ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೆಸರಿಗೆ ಖಾತೆ ಬಂದ ನಂತರ ಅವರವರ ಹೆಸರಿನ ಖಾತೆಗಳ ಆರ್.ಟಿ.ಸಿ.ಗಳನ್ನು ತೆಗೆದು ನೋಡುವುದು ನಮ್ಮಗಳ ಕರ್ತವ್ಯ ಎಂದರೆ ನಾನು ನೋಡಿದ್ದೇನೆ. ಈ ರೀತಿ ನಾನು ಆರ್.ಟಿ.ಸಿ.ಗಳನ್ನು ನೋಡಿದ್ದ ಕಾರಣ ಅದರಲ್ಲಿ ಏನೂ ನಮೂದಾಗಿ ಬರುತ್ತಿತ್ತು ಎಂಬ ವಿಚಾರ ನನಗೆ ತಿಳಿದಿತ್ತು ಎಂದರೆ ಸರಿ.

17. 2 ಮತ್ತು 3 ನೇ ಪ್ರತಿವಾದಿಗಳು ಅವರವರ ಆಸ್ತಿಯನ್ನು ಸೊಸೈಟಿಗೆ ಅಡಮಾನ ಮಾಡಿ ಸಾಲ ಪಡೆದುಕೊಂಡಿದ್ದರು ಎಂದರೆ ಸರಿ. 2 ಮತ್ತು 3 ನೇ ಪ್ರತಿವಾದಿಗಳು ಅವರವರ ಆಸ್ತಿಯನ್ನು ಅಡಮಾನ ಮಾಡಿ ಸಾಲ ಪಡೆದುಕೊಂಡಿದ್ದ ಬಗ್ಗೆ ಪ್ರತ್ಯೇಕ ಎಮ್.ಆರ್ ಗಳು ಕೂಡ ಆಗಿವೆ ಎಂದರೆ ಆಗಿರಬಹುದು, ನನಗೆ ಗೊತ್ತಿಲ್ಲ. ಅದೇ ರೀತಿ ಇ.ಸಿ.ಯಲ್ಲೂ ಕೂಡ ಪ್ರತಿವಾದಿಗಳು ಸಹಾಕರ ಸಂಘದಿಂದ ಸಾಲ ಪಡೆದುಕೊಂಡಿದ್ದ ಬಗ್ಗೆ ಬರುತ್ತಿದೆ ಎಂದರೆ ಇರಬಹುದು. ಆದ್ದರಿಂದಲೆ ನಾನು ನ್ಯಾಯಾಲಯಕ್ಕೆ ಬಂದಿರುವುದು ಎನ್ನುತ್ತಾರೆ. ಸದರಿ ಇ.ಸಿ.ಯನ್ನು ನಿಡಿ.8 ಎಂದು ಗುರುತಿಸಲಾಯಿತು.

18. ದಾವ ಸರ್ವೇ ನಂ.246/1 ರಲ್ಲಿ 34 ಗುಂಟೆ ಹಾಗೂ ಸರ್ವೇ ನಂ.246/2 ರಲ್ಲಿ 34 ಗುಂಟೆ ಮೇಲೆ ಸಾಲ ತೆಗೆದುಕೊಳ್ಳಲಾಗಿದೆ ಎಂದರೆ ಇರಬಹುದು. ನಾನು, 2 ಮತ್ತು 3 ನೇ ಪ್ರತಿವಾದಿಗಳು ಚೆನ್ನಾಗಿದ್ದೇವೆ ಎಂದರೆ ಅಣ್ಣ-ತಮ್ಮಂದಿರ ವಿಶ್ವಾಸದಲ್ಲಿ ಚೆನ್ನಾಗಿದ್ದೇವೆ. ಪ್ರತಿವಾದಿಗಳು ಏನೇನೂ ಕೆಲಸ ಮಾಡುತ್ತಾರೆ ಎಂಬೆಲ್ಲಾ ವಿಚಾರಗಳು ನನಗೆ ತಿಳಿದಿವೆ ಎಂದರೆ ಸರಿಯಲ್ಲ. ತಮ್ಮ ತಮ್ಮ ಭಾಗದ ಸ್ವತ್ತುಗಳ ಮೇಲೆ ಸಾಲ ತೆಗೆದುಕೊಂಡಿರುವ ವಿಚಾರ ಕೂಡ ನನಗೆ ತಿಳಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಮೈಸೂರಿನಲ್ಲಿ ವಾಸವಾಗಿದ್ದೇನೆ, ಹಾಗಾದರೆ ಜಮೀನಿನ ವ್ಯವಸಾಯ ಯಾರು ಮಾಡುತ್ತಾರೆ ಎಂದರೆ, ನಾನೇ ಮಾಡುತ್ತೇನೆ. ನಾವು ಪ್ರತ್ಯೇಕಗೊಂಡ ಸಮಯದಿಂದಲೂ ನಾನೇ ವ್ಯವಸಾಯ ಮಾಡಿಸುತ್ತಿದ್ದೇನೆ. ಈ ರೀತಿ ನಾನು ಜಮೀನಿನ ವ್ಯವಸಾಯ ಮಾಡುತ್ತಿದ್ದರಿಂದ ದಾಖಲೆಗಳನ್ನು ಪಡೆದುಕೊಂಡು ನೋಡಬೇಕೆಂಬ ವಿಚಾರ ನನಗೆ ತಿಳಿದಿತ್ತು ಎಂದರೆ ದಾಖಲೆ ನೋಡುವ ಸಂಧರ್ಭ ಉಂಟಾಗಿರಲಿಲ್ಲ. ನನ್ನ ಅಣ್ಣಂದಿರು ಸಾಲ ತೆಗೆದುಕೊಂಡ ವಿಚಾರ ನನಗೆ ತಿಳಿದಿತ್ತು ಎಂದರೆ ಬೇರೆಯವರ ಕಡೆಯಿಂದ ತಿಳಿದಿತ್ತು.

**ಮುಂದುವರಿದ ಪಾಟೀಸವಾಲುಃ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಜೈಬುನ್ನಿಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.